# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1102
ಸದಸ್ಯರ ಹೆಸರು : ಶ್ರೀ ಹೆಚ್.ಎಂ.ರಮೇಶ್ ಗೌಡ
ಉತ್ತರಿಸುವ ದಿನಾಂಕ : 13.03.2020
ಉತ್ತರಿಸುವ ಸಚಿವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಒಟ್ಟು ಅಂಗವಿಕಲರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)</td><td>2011ರ ಜನಗಣತಿ ಪ್ರಕಾರ ತಾಲ್ಲೂಕುವಾರು ವಿವರ ಇಲ್ಲದಿರುವ ಕಾರಣ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ.</td></tr>
<tr><td>ಆ)</td><td>ಇವರುಗಳ ಅಭಿವೃದ್ಧಿಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳು ಯಾವುವು; (ವಿವರ ನೀಡುವುದು)</td><td>ಸರ್ಕಾರ ರೂಪಿಸಿರುವ ಯೋಜನೆಗಳ ವಿವರವನ್ನು ಅನುಬಂಧ-2ರಲ್ಲಿ ಒದಗಿಸಿದೆ.</td></tr>
<tr><td>ಇ)</td><td>ಕಳೆದ 3 ವರ್ಷಗಳಲ್ಲಿ ಇವರ ಅಭಿವೃದ್ಧಿಗಾಗಿ ರೂಪಿಸಿರುವ ಯೋಜನೆಗಳಿಗೆ ಸರ್ಕಾರ ನಿಗದಿಪಡಿಸಿ ಬಿಡುಗಡೆ ಮಾಡಿ ವೆಚ್ಚ ಮಾಡಿರುವ ಮೊತ್ತವೆಷ್ಟು;</td><td>ಕಳೆದ 3 ವರ್ಷಗಳಲ್ಲಿ ವಿಕಲಚೇತನರ ಅಭಿವೃದ್ಧಿಗಾಗಿ ರೂಪಿಸಿರುವ ಯೋಜನೆಗಳಿಗೆ ಸರ್ಕಾರ ನಿಗದಿಪಡಿಸಿ ಬಿಡುಗಡೆ ಮಾಡಿ ವೆಚ್ಚ ಮಾಡಿರುವ ವಿವರವನ್ನು ಅನುಬಂಧ-3ರಲ್ಲಿ ಒದಗಿಸಿದೆ.</td></tr>
<tr><td>ಈ)</td><td>ಇವರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಅನುದಾನವನ್ನು ನೀಡುತ್ತಿದೆಯೇ; ಹಾಗಿದ್ದಲ್ಲಿ, ಕಳೆದ 3 ವರ್ಷಗಳಲ್ಲಿ ಕೇಂದ್ರದಿಂದ ಬಂದ ಅನುದಾನವೆಷ್ಟು? (ವಿವರ ನೀಡುವುದು)</td><td>ಕೇಂದ್ರ ಸರ್ಕಾರದಿಂದ ಸುಗಮ್ಯ ಭಾರತ ಅಭಿಯಾನ ಯೋಜನೆಯಡಿ ಸರ್ಕಾರಿ ಸಾರ್ವಜನಿಕ ಕಟ್ಟಡಗಳಲ್ಲಿ ವಿಕಲಚೇತನರು ಸುಗಮವಾಗಿ ಚಲಿಸುವಂತೆ ಅಡೆತಡೆ ರಹಿತ ವಾತಾವರಣ ನಿರ್ಮಿಸಲು ಈ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.<br><table><tr><th>ಕ್ರ. ಸಂ.</th><th>ವರ್ಷ</th><th>ಕಟ್ಟಡಗಳ ಸಂಖ್ಯೆ</th><th>ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ)</th></tr><tr><td>1</td><td>2017-18</td><td>-</td><td>-</td></tr><tr><td>2</td><td>2018-19</td><td>20</td><td>1104.11</td></tr><tr><td>3</td><td>2019-20</td><td>27</td><td>1604.53</td></tr></table></td></tr>
</table>

**ಸಂಖ್ಯೆ: ಮಮಇ 64 ಪಿಹೆಚ್‌ಪಿ 2020**

(ಶಶಿಕಲಾ ಅ. ಜೊಲ್ಲೆ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ
ಇಲಾಖಾ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹೆಚ್.ಎಂ. ರಮೇಶ್ ಗೌಡ ಇವರ ಚುಕ್ಕೆಗುರುತಿಲ್ಲದ ಪ್ರಶ್ನೆಸಂಖ್ಯೆ:1102ಕ್ಕೆ

ಅನುಬಂಧ-1

**2011ರ ಸಮೀಕ್ಷೆ ಪ್ರಕಾರ ಕರ್ನಾಟಕ ರಾಜ್ಯದಲ್ಲಿನ ಜಿಲ್ಲಾವಾರು ವಿಕಲಚೇತನರ ಅಂಕಿ-ಅಂಶ**

| ಕ್ರ.ಸಂ | ಜಿಲ್ಲೆಯ ಹೆಸರು | ದೃಷ್ಟಿ ದೋಷವುಳ್ಳ ವ್ಯಕ್ತಿಗಳು | ವಾಕ್ ಶ್ರವಣ ದೋಷವುಳ್ಳ ವ್ಯಕ್ತಿಗಳು | ದೈಹಿಕ ನ್ಯೂನತೆ ಯುಳ್ಳ ವ್ಯಕ್ತಿಗಳು | ಬುದ್ಧಿಮಾಂದ್ಯತೆಯುಳ್ಳ ವ್ಯಕ್ತಿಗಳು | ಮಾನಸಿಕ ಅಸ್ವಸ್ಥತೆವುಳ್ಳ ವ್ಯಕ್ತಿಗಳು | ಇತರೆ | ಬಹುವಿಧ ನ್ಯೂನತೆ ಯುಳ್ಳ ವ್ಯಕ್ತಿಗಳ ಸಂಖ್ಯೆ | ಒಟ್ಟು |
|---|---|---|---|---|---|---|---|---|---|
| 1 | ಬೆಂಗಳೂರು ನಗರ | 83910 | 78503 | 19732 | 15176 | 2707 | 63520 | 10682 | **274230** |
| 2 | ಬೆಂಗಳೂರು ಗ್ರಾ | 3857 | 4053 | 4568 | 1386 | 314 | 4217 | 1899 | **20294** |
| 3 | ಬೆಳಗಾವಿ | 14349 | 19615 | 26489 | 8054 | 1553 | 14805 | 7729 | **92594** |
| 4 | ಬಳ್ಳಾರಿ | 8895 | 12515 | 11997 | 3770 | 704 | 9532 | 3482 | **50895** |
| 5 | ಬೀದರ್ | 7112 | 10629 | 10747 | 2519 | 488 | 7929 | 3213 | **42637** |
| 6 | ವಿಜಾಪುರ | 6961 | 10674 | 10639 | 3351 | 511 | 7728 | 3669 | **43533** |
| 7 | ಬಾಗಲಕೋಟೆ | 7128 | 9767 | 12201 | 3155 | 500 | 6725 | 3703 | **43179** |
| 8 | ಚಿತ್ರದುರ್ಗ | 6196 | 8976 | 8373 | 2461 | 415 | 6589 | 2961 | **35971** |
| 9 | ಚಿಕ್ಕಮಗಳೂರು | 4360 | 4154 | 4947 | 1579 | 320 | 3750 | 2114 | **21224** |
| 10 | ಚಾಮರಾಜನಗರ | 3178 | 5674 | 4079 | 1377 | 325 | 3613 | 2218 | **20464** |
| 11 | ಧಾರವಾಡ | 6105 | 8061 | 10020 | 3074 | 777 | 5988 | 3196 | **37221** |
| 12 | ದಕ್ಷಿಣ ಕನ್ನಡ | 4094 | 5717 | 5881 | 3078 | 1927 | 3702 | 3696 | **28095** |
| 13 | ದಾವಣಗೆರೆ | 7027 | 10072 | 8760 | 3127 | 495 | 8358 | 2980 | **40819** |
| 14 | ಗುಲ್ಬರ್ಗಾ | 12752 | 19659 | 12485 | 4066 | 657 | 12948 | 3825 | **66392** |
| 15 | ಗದಗ್ | 3949 | 5190 | 7079 | 2014 | 350 | 4253 | 2279 | **25114** |
| 16 | ಹಾಸನ | 5289 | 7375 | 6907 | 2360 | 362 | 7240 | 2699 | **32232** |
| 17 | ಹಾವೇರಿ | 6203 | 6829 | 11332 | 3166 | 593 | 6053 | 3584 | **37760** |
| 18 | ಕೊಡಗು | 757 | 1734 | 1669 | 720 | 218 | 1478 | 793 | **7369** |
| 19 | ಕೋಲಾರ | 5278 | 8201 | 7321 | 2295 | 625 | 5732 | 2825 | **32277** |
| 20 | ಕೊಪ್ಪಳ | 5749 | 7575 | 9963 | 2351 | 495 | 5942 | 2524 | **34599** |
| 21 | ಮೈಸೂರು | 12484 | 17843 | 9812 | 3792 | 814 | 11189 | 4536 | **60470** |
| 22 | ಮಂಡ್ಯ | 7234 | 8240 | 8848 | 2625 | 481 | 5602 | 3198 | **36228** |
| 23 | ರಾಯಚೂರು | 7785 | 9555 | 8804 | 2604 | 556 | 6990 | 3072 | **39366** |
| 24 | ಶಿವಮೊಗ್ಗ | 4502 | 6087 | 6957 | 2701 | 582 | 5125 | 2881 | **28835** |
| 25 | ತುಮಕೂರು | 10198 | 14101 | 15260 | 3828 | 931 | 9335 | 5304 | **58957** |
| 26 | ಉತ್ತರ ಕನ್ನಡ | 3284 | 4406 | 6047 | 2184 | 905 | 3102 | 2665 | **22593** |
| 27 | ಉಡುಪಿ | 2317 | 3412 | 3448 | 1930 | 1136 | 2507 | 2172 | **16922** |
| 28 | ರಾಮನಗರ | 3113 | 4598 | 4850 | 1466 | 305 | 2982 | 1869 | **19183** |
| 29 | ಚಿಕ್ಕಬಳ್ಳಾಪುರ | 5445 | 6513 | 7051 | 2175 | 609 | 5388 | 2667 | **29848** |
| 30 | ಯಾದಗಿರಿ | 4659 | 6704 | 5716 | 1590 | 258 | 4399 | 1578 | **24904** |
| | ಒಟ್ಟು | **264170** | **326432** | **271982** | **93974** | **20913** | **246721** | **100013** | **1324205** |

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹೆಚ್.ಎಂ. ರಮೇಶ್ ಗೌಡ ಇವರ ಚುಕ್ಕೆಗುರುತಿಲ್ಲದ ಪ್ರಶ್ನೆಸಂಖ್ಯೆ:1102ಕ್ಕೆ ಅನುಬಂಧ-2

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು

ಇಲಾಖೆಯ ಕಾರ್ಯಕ್ರಮಗಳನ್ನು 3 ವಿಭಾಗಗಳಲ್ಲಿ ವರ್ಗೀಕರಿಸಲಾಗಿದೆ.

1. ವಿಕಲಚೇತನರಿಗಾಗಿ ಅಭಿವೃದ್ಧಿ ಕಾರ್ಯಕ್ರಮಗಳು.
2. ಹಿರಿಯ ನಾಗರಿಕರಿಗಾಗಿ ಅಭಿವೃದ್ಧಿ ಕಾರ್ಯಕ್ರಮಗಳು.
3. ಸಾಮಾಜಿಕ ಭದ್ರತೆ ಮತ್ತು ರಕ್ಷಣೆ ಕಾರ್ಯಕ್ರಮಗಳು.

ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳು:

(ಎ) ಶೈಕ್ಷಣಿಕ:-

1) ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಶಾಲೆಗಳು:

ಇಲಾಖೆಯಡಿ ಶ್ರವಣದೋಷವುಳ್ಳ ಮಕ್ಕಳಿಗಾಗಿ ಬೆಂಗಳೂರು ನಗರ, ಮೈಸೂರು, ಕಲಬುರ್ಗಿ, ಬಳ್ಳಾರಿ, ಬೆಳಗಾವಿ ಜಿಲ್ಲೆಗಳಲ್ಲಿ 5 ಕಿವುಡು ಮಕ್ಕಳ ವಸತಿ ಶಾಲೆಗಳನ್ನು ನಡೆಸಲಾಗುತ್ತಿದೆ. ಈ ಶಾಲೆಗಳಲ್ಲಿ ಮಕ್ಕಳಿಗೆ ಉಚಿತ ವಸತಿ, ಊಟ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ. ಈ ಪೈಕಿ ಶ್ರವಣದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ಬೆಳಗಾವಿಯಲ್ಲಿ ಪ್ರತ್ಯೇಕ ವಸತಿ ಶಾಲೆ ಇರುತ್ತದೆ.

2. ಅಂಧ ಮಕ್ಕಳಿಗಾಗಿ ವಸತಿಯುತ ಶಾಲೆಗಳು:

ಇಲಾಖೆಯಡಿ 4 ಅಂಧ ಮಕ್ಕಳ ವಸತಿ ಶಾಲೆಗಳು ಕಲಬುರ್ಗಿ, ಮೈಸೂರು, ದಾವಣಗೆರೆ ಹಾಗೂ ಹುಬ್ಬಳ್ಳಿಯಲ್ಲಿ ನಡೆಸಲಾಗುತ್ತಿದೆ. ಈ ಶಾಲೆಗಳಲ್ಲಿ ದೃಷ್ಟಿದೋಷವುಳ್ಳ ಮಕ್ಕಳಿಗೆ ಉಚಿತ ಊಟ, ವಸತಿ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ. ಈ ಪೈಕಿ ದೃಷ್ಟಿದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ದಾವಣಗೆರೆಯಲ್ಲಿ ಪ್ರತ್ಯೇಕ ವಸತಿ ಶಾಲೆ ಇರುತ್ತದೆ.

3. ಸರ್ಕಾರಿ ಅನುದಾನಿತ ಶಾಲೆಗಳು

(ಅ) 1982ರ ರಾಜ್ಯ ಅನುದಾನ ಸಂಹಿತೆಯಡಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 34 ವಿಶೇಷ ಶಾಲೆ/ ತರಬೇತಿ ಕೇಂದ್ರಗಳನ್ನು ದೈಹಿಕ, ಅಂಧ, ಶ್ರವಣದೋಷ ಹಾಗೂ ಬುದ್ಧಿಮಾಂದ್ಯ ಮಕ್ಕಳಿಗಾಗಿ ನಡೆಸಲಾಗುತ್ತಿದೆ. ರಾಜ್ಯ ಸರ್ಕಾರದಿಂದ ಅನುದಾನವನ್ನು ಜಿಲ್ಲಾ ಪಂಚಾಯತ್ ಮೂಲಕ ಬಿಡುಗಡೆ ಮಾಡಲಾಗುತ್ತಿದೆ.

(ಆ)ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ: ಈ ಯೋಜನೆಯಡಿ ಬುದ್ಧಿಮಾಂದ್ಯ (ಸೆರಬ್ರಲ್ ಪಾಲ್ಸಿ, ಆಟಿಸಂ), ದೃಷ್ಟಿದೋಷ, ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಹಾಗೂ ವಸತಿರಹಿತ ಶಾಲೆಗಳು ಸೇರಿದಂತೆ ಒಟ್ಟು 133 ವಿಶೇಷ ಶಾಲೆಗಳು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿವೆ. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶ್ರವಣದೋಷವುಳ್ಳ ಹಾಗೂ ದೃಷ್ಟಿದೋಷವುಳ್ಳ ಮಕ್ಕಳ ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.6200/- ರಂತೆ ಹಾಗೂ ವಸತಿರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.5200/- ರಂತೆ ಹಾಗೂ ಬುದ್ಧಿಮಾಂದ್ಯ ಮಕ್ಕಳ ಮಕ್ಕಳ ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.6800/- ರಂತೆ ಹಾಗೂ ವಸತಿರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ. 6000/- ರಂತೆ ವರ್ಷದಲ್ಲಿ 10 ತಿಂಗಳ ಅವಧಿಗೆ ಅನುದಾನವನ್ನು ಮಂಜೂರು ಮಾಡಲಾಗುತ್ತಿದೆ. ಈ ಅನುದಾನದಲ್ಲಿ ಶಿಕ್ಷಕರ ಗೌರವಧನ, ಮಕ್ಕಳ ಆಹಾರ ವೆಚ್ಚ, ಕಟ್ಟಡದ ಬಾಡಿಗೆ ಹಾಗೂ ನಿರ್ವಹಣಾ ವೆಚ್ಚ, ಸಮವಸ್ತ್ರ, ವೈದ್ಯಕೀಯ ವೆಚ್ಚ ಹಾಗೂ ಸಾದಿಲ್ವಾರು ವೆಚ್ಚಗಳು ಒಳಗೊಂಡಿರುತ್ತವೆ.

(ಇ) ಕೇಂದ್ರ ಸರ್ಕಾರದ ದೀನ್‌ದಯಾಳ್ ಪುನರ್ವಸತಿ ಯೋಜನೆಯಡಿ 8 ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವಿಶೇಷ ಶಾಲೆ /ವೃತ್ತಿ ತರಬೇತಿ ಕೇಂದ್ರಗಳು ನಡೆಯುತ್ತಿದ್ದು, ಸದರಿ ಶಾಲೆ ಹಾಗೂ ತರಬೇತಿ ಕೇಂದ್ರಗಳಿಗೆ ಕೇಂದ್ರ ಸರ್ಕಾರದಿಂದ ಶೇ.90ರಷ್ಟು ಅನುದಾನವನ್ನು ಮಂಜೂರು ಮಾಡಲಾಗುತ್ತಿದ್ದು, ಉಳಿದ ಶೇ.10ರಷ್ಟು ವೆಚ್ಚವನ್ನು ಸಂಸ್ಥೆಯವರು ಭರಿಸಬೇಕಾಗಿರುತ್ತದೆ.

4. ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹನ ಧನ:

ಈ ಯೋಜನೆಯಡಿ ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ಅರ್ಹ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಆಯಾ ಜಿಲ್ಲಾ ಕಛೇರಿಗಳ ಮೂಲಕ ಮಂಜೂರು ಮಾಡಲಾಗುತ್ತಿದೆ. 2001-02ನೇ ಸಾಲಿನಿಂದ ಈ ಯೋಜನೆಯ ಫಲಾನುಭವಿಗಳಿಗೆ ಆದಾಯ ಮಿತಿಯಿಂದ ವಿನಾಯಿತಿಗೊಳಿಸಲಾಗಿದೆ.

5. ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಯೋಜನೆ:

ಸಾರ್ವತ್ರಿಕ ಪರೀಕ್ಷೆಗಳಲ್ಲಿ ಶೇಕಡ 60 ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಯೋಜನೆ ಇದಾಗಿದೆ. ಈ ಯೋಜನೆಯನ್ನು 2001-02ನೇ ಸಾಲಿನಿಂದ ಬಿ.ಎಡ್, ಎಂ.ಎಡ್. ಮತ್ತು ಟಿ.ಸಿ.ಹೆಚ್. ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ.

6. ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ:

ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಎಸ್.ಎಸ್.ಎಲ್.ಸಿ ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸುವ ಯೋಜನೆಯನ್ನು 2013-14ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯಮಿತಿ ಇರುವುದಿಲ್ಲ. ವೈದ್ಯಕೀಯ ಮಂಡಳಿಯವರು ಶಿಫಾರಸ್ಸು ಮಾಡಿರುವ ವಿಕಲಚೇತನ ಅಭ್ಯರ್ಥಿಗಳು ಮಾತ್ರ ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

7. ಬ್ರೈಲ್ ಮುದ್ರಣಾಲಯ:

ದೃಷ್ಟಿದೋಷವುಳ್ಳ ಮಕ್ಕಳಿಗೆ ಬೇಕಾಗುವ ಬ್ರೈಲ್ ಪುಸ್ತಕಗಳನ್ನು ಮುದ್ರಿಸಿ ಸಂಬಂಧಪಟ್ಟ ಅಂಧರ ಶಾಲೆಗಳಿಗೆ ಮೈಸೂರಿನಲ್ಲಿರುವ ಬ್ರೈಲ್ ಮುದ್ರಣಾಲಯದ ಮೂಲಕ ಉಚಿತವಾಗಿ ಸರಬರಾಜು ಮಾಡಲಾಗುತ್ತಿದೆ.

8. ವಿಶೇಷ ಶಿಕ್ಷಣ ತರಬೇತಿ ಕೇಂದ್ರ ಯೋಜನೆ:

ದೃಷ್ಟಿದೋಷವುಳ್ಳ ಹಾಗೂ ಶ್ರವಣದೋಷವುಳ್ಳ ವಿದ್ಯಾರ್ಥಿಗಳಿಗೆ ಬೋಧಿಸುವ ಶಿಕ್ಷಕರಿಗೆ ವಿಶೇಷ ಶಿಕ್ಷಣ ನೀಡಲು ತಲಾ ಒಂದರಂತೆ ವಿಶೇಷ ಶಿಕ್ಷಕರ ತರಬೇತಿ ಕೇಂದ್ರವನ್ನು ಮೈಸೂರಿನಲ್ಲಿ ನಡೆಸುತ್ತಿದ್ದು, ಪ್ರತಿ ವರ್ಷ ಪ್ರತಿ ಕೇಂದ್ರದಲ್ಲಿ 25 ಪ್ರಶಿಕ್ಷಣಾರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ.

9. ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರಗಳು:

ಸೆರಬ್ರಲ್ ಪಾಲ್ಸಿ, ಆಟಿಸಂ, ಮಾನಸಿಕ ಅಸ್ವಸ್ಥ ಹಾಗೂ ತೀವ್ರತರದ ಅಂಗವೈಕಲ್ಯತೆ ಹೊಂದಿರುವ ಮೂರರಿಂದ 25 ವರ್ಷದ ಒಳಗಿನ ಮಕ್ಕಳಿಗಾಗಿ 02 ಹಗಲು ಯೋಗಕ್ಷೇಮ ಕೇಂದ್ರಗಳನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿದ್ದು, ಪ್ರತಿ ಕೇಂದ್ರದಲ್ಲಿ 25 ಮಕ್ಕಳನ್ನು ದಾಖಲಿಸಲು ಅವಕಾಶವಿದ್ದು, ಪ್ರತಿ ಮಗುವಿಗೆ ಮಾಸಿಕ ರೂ. 10,000/-ಗಳಂತೆ ವಾರ್ಷಿಕ 25.00 ಲಕ್ಷಗಳನ್ನು ಮಂಜೂರು ಮಾಡಲಾಗುತ್ತಿದೆ. ಪ್ರತಿ ವಿಭಾಗವಾರು ಹಗಲು ಯೋಗಕ್ಷೇಮ ಕೇಂದ್ರಗಳನ್ನು ಪ್ರಾರಂಭಿಸಲು ಕ್ರಮಕೈಗೊಳ್ಳಲಾಗುತ್ತಿದೆ.

(ಬಿ) ಉದ್ಯೋಗ ಮತ್ತು ತರಬೇತಿ:

1. ವಿಕಲಚೇತನರಿಗೆ ವೃತ್ತಿ ತರಬೇತಿ ಕೇಂದ್ರಗಳು:

ಈ ಯೋಜನೆಯ ಉದ್ದೇಶವು ವಿವಿಧ ರೀತಿಯ ವಿಕಲಚೇತನರಿಗೆ ವೃತ್ತಿ ತರಬೇತಿಯನ್ನು ನೀಡುವುದಾಗಿದೆ. 1982ರ ರಾಜ್ಯ ಅನುದಾನ ಸಂಹಿತೆಯಡಿ 5 ವೃತ್ತಿ ತರಬೇತಿ ಕೇಂದ್ರಗಳನ್ನು ರಾಜ್ಯ ಸಹಾಯಾನುದಾನದಡಿ ಬೆಂಗಳೂರು ಮತ್ತು ಮೈಸೂರಿನಲ್ಲಿ ನಡೆಸಲಾಗುತ್ತಿದೆ. ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ವಾಕ್‌ಶ್ರವಣ ಕೇಂದ್ರವನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ. ವೃತ್ತಿ ತರಬೇತಿ ಕೇಂದ್ರಗಳಲ್ಲಿ ವಿವಿಧ ರೀತಿಯ ವಿಕಲಚೇತನರಿಗೆ ಫಿಟ್ಟರ್, ಟರ್ನರ್, ಸರಳ ಇಂಜಿನಿಯರಿಂಗ್, ಬೆತ್ತ, ಹಗ್ಗ, ಚಾಪೆ ಹೆಣೆಯುವುದು ಹಾಗೂ ಪ್ಲಾಸ್ಟಿಕ್ ಮೌಲ್ಡಿಂಗ್ ತರಬೇತಿಯನ್ನು ನೀಡಲಾಗುತ್ತಿದೆ. ಪ್ರತಿ ತರಬೇತಿ ಕೇಂದ್ರದಲ್ಲಿ ವಾರ್ಷಿಕ 25 ಫಲಾನುಭವಿಗಳು ತರಬೇತಿ ಪಡೆಯುತ್ತಿದ್ದಾರೆ.

2. ಅಂಗವಿಕಲ ಪುರುಷ ಹಾಗೂ ಮಹಿಳೆಯರ ವಸತಿನಿಲಯ:

ಬೆಂಗಳೂರಿನಲ್ಲಿ ಮಹಿಳಾ ಮತ್ತು ಪುರುಷ ಅಂಗವಿಕಲ ನೌಕರರು ಮತ್ತು ಪ್ರಶಿಕ್ಷಣಾರ್ಥಿಗಳಿಗೆ ಪ್ರತ್ಯೇಕವಾದ ಒಂದೊಂದು ವಸತಿ ನಿಲಯವನ್ನು ನಡೆಸಲಾಗುತ್ತಿದೆ. ಪುರುಷರ ವಸತಿ ನಿಲಯದಲ್ಲಿ 50 ನಿವಾಸಿಗಳು ಹಾಗೂ ಮಹಿಳೆಯರ ವಸತಿ ನಿಲಯದಲ್ಲಿ 50 ನಿವಾಸಿಗಳನ್ನು ದಾಖಲಿಸಲು ಅವಕಾಶವಿದೆ.

3. ಆಧಾರ ಯೋಜನೆ :

ವಿಕಲಚೇತನರು ಸ್ವಯಂ ಉದ್ಯೋಗ ಕೈಗೊಂಡು ಜೀವನ ಸಾಗಿಸಲು ಅನುಕೂಲವಾಗುವಂತೆ ಆಧಾರ ಎಂಬ ಸಾಲ ಯೋಜನೆಯನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ನೇತೃತ್ವದಲ್ಲಿ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಪ್ರತಿ ಫಲಾನುಭವಿಗೆ ರೂ.15,000/-ಗಳ ಮೌಲ್ಯದ ಕಬ್ಬಿಣದ ಗೂಡಂಗಡಿಯನ್ನು ಉಚಿತವಾಗಿ ಹಾಗೂ ರೂ.20,000/-ಗಳ ನಿರ್ವಹಣಾ ಬಂಡವಾಳವನ್ನು ಬಡ್ಡಿ ರಹಿತ ಸಾಲದ ರೂಪದಲ್ಲಿ ನೀಡಲಾಗುತ್ತಿದೆ. 2018-19ನೇ ಸಾಲಿನ ಆಯವ್ಯಯ ಭಾಷಣದಲ್ಲಿ 'ಆಧಾರ' ಸ್ವಯಂ ಉದ್ಯೋಗ ಯೋಜನೆಯ ಘಟಕ ವೆಚ್ಚವನ್ನು ಈಗಿರುವ ರೂ.0.35ಲಕ್ಷಗಳಿಂದ ರೂ.1.00 ಲಕ್ಷ ರೂ.ಗಳಿಗೆ ಹೆಚ್ಚಿಸಿ, ಇದರಲ್ಲಿ ಶೇ.50ರಷ್ಟು ಬ್ಯಾಂಕ್ ಸಾಲ ಮತ್ತು ಶೇ.50ರಷ್ಟು ಸಹಾಯಧನ ಒದಗಿಸಲಾಗಿದೆ.

4. ಗ್ರಾಮೀಣ ಪುನರ್ವಸತಿ ಯೋಜನೆ:

ಈ ಯೋಜನೆಯನ್ನು ರಾಜ್ಯದ ಎಲ್ಲಾ 30 ಜಿಲ್ಲೆಗಳ 176 ತಾಲ್ಲೂಕುಗಳಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ. ಪ್ರತಿ ಗ್ರಾಮ ಪಂಚಾಯತಿ ಅಡಿಯಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣ/ ಅನುತ್ತೀರ್ಣರಾದ ಸಮರ್ಥ ವಿಕಲಚೇತನರನ್ನು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರೆಂದು ಹಾಗೂ ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಸ್ಥಳೀಯ ಸಮರ್ಥ ಪದವೀಧರ ವಿಕಲಚೇತನರೊಬ್ಬರನ್ನು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರೆಂದು, ಸ್ಥಳೀಯ ನಗರ ಪ್ರದೇಶಗಳಲ್ಲಿ ನಗರ ಪುನರ್ವಸತಿ ಕಾರ್ಯಕರ್ತರೆಂದು ಮತ್ತು ನಿರ್ದೇಶನಾಲಯದಲ್ಲಿ ರಾಜ್ಯ ಸಂಯೋಜಕರನ್ನು ಗೌರವಧನ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಈ ಕಾರ್ಯಕರ್ತರ ಮೂಲಕ ವಿಕಲಚೇತನರಿಗೆ ಎಲ್ಲಾ ಸೇವಾ ಸೌಲಭ್ಯಗಳನ್ನು ಅವರಿರುವ ಸ್ಥಳಗಳಲ್ಲಿಯೇ ವಿಕಲಚೇತನರ ಮೂಲಕವೇ ತಲುಪಿಸಲಾಗುವುದು.

ಸರ್ಕಾರದ ಆದೇಶ ಸಂಖ್ಯೆ: ಮಮಇ/241/ಪಿಹೆಚ್‌ಪಿ/2019, ದಿನಾಂಕ: 07-02-2020ರಂತೆ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಹಾಗೂ ನಗರ ಪುನರ್ವಸತಿ ಕಾರ್ಯಕರ್ತರುಗಳ ಗೌರವಧನವನ್ನು ರೂ.3000/-ಗಳಿಂದ ರೂ.6000/-ಗಳಿಗೆ ಹಾಗೂ ವಿವಿದ್ದೊದ್ದೇಶ ಪುನರ್ವಸತಿ ಕಾರ್ಯಕರ್ತರ ಗೌರವಧನವನ್ನು ರೂ.6000/-ಗಳಿಂದ ರೂ.12,000/-ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ.

5. ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ವಸತಿ ನಿಲಯಗಳು:

ಅಂಗವಿಕಲ ಉದ್ಯೋಗಸ್ಥ ಮಹಿಳೆಯರಿಗಾಗಿ ಹಾಗೂ ವಿದ್ಯಾರ್ಥಿನಿ/ತರಬೇತಾರ್ಥಿಗಳಿಗೆ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಜಿಲ್ಲಾ ಕೇಂದ್ರಗಳಲ್ಲಿ 26 ಮಹಿಳಾ ವಸತಿ ನಿಲಯಗಳನ್ನು ನಡೆಸುತ್ತಿದ್ದು, ಸದರಿ ವಸತಿ ನಿಲಯದಲ್ಲಿ ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ಹಾಗೂ ವಿದ್ಯಾರ್ಥಿನಿಯರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲಾಗಿದೆ. ಈ ವಸತಿ ನಿಲಯದಲ್ಲಿ ವಿದ್ಯಾರ್ಥಿನಿಯರು ಹಾಗೂ ತರಬೇತಿದಾರರಿಗೆ ಉಚಿತ ಊಟದ ವ್ಯವಸ್ಥೆಯಿದ್ದು, ಉದ್ಯೋಗಸ್ಥ ಮಹಿಳೆಯರು ಮಾಸಿಕ 800/-ಗಳನ್ನು ಪಾವತಿಸಬೇಕಾಗಿರುತ್ತದೆ.

ಸಿ. ಸಾಮಾಜಿಕ ಭದ್ರತಾ ಯೋಜನೆಗಳು:

1. ಸಮಾಜ ಸೇವಾ ಸಂಕೀರ್ಣ:

ನಿರ್ಗತಿಕ ಬುದ್ಧಿಮಾಂದ್ಯ ಪುರುಷರಿಗಾಗಿ ಸಮಾಜ ಸೇವಾ ಸಂಕೀರ್ಣ ಸಂಸ್ಥೆಯು ಬೆಂಗಳೂರಿನಲ್ಲಿ ಸರ್ಕಾರದ ವತಿಯಿಂದ ನಡೆಯುತ್ತಿದ್ದು, ಈ ಸಂಸ್ಥೆಯಲ್ಲಿ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ, ಸಂರಕ್ಷಣೆ ಒದಗಿಸಲಾಗುತ್ತಿದೆ.

2. ಮಂದಮತಿ ಮಹಿಳೆಯರ ಅನುಪಾಲನಾ ಗೃಹ:

18 ವರ್ಷ ಮೇಲ್ಪಟ್ಟ ನಿರ್ಗತಿಕ ಮಹಿಳಾ ಬುದ್ಧಿಮಾಂದ್ಯರಿಗೆ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ ಮತ್ತು ಸಂರಕ್ಷಣೆ ಒದಗಿಸುವ ಉದ್ದೇಶದಿಂದ ಮಂದಮತಿ ಮಹಿಳೆಯರ ಅನುಪಾಲನಾ ಗೃಹಗಳನ್ನು ಬೆಂಗಳೂರು ನಗರ ಹಾಗೂ ಹುಬ್ಬಳ್ಳಿಯಲ್ಲಿ ಇಲಾಖಾವತಿಯಿಂದ ನಡೆಸಲಾಗುತ್ತಿದೆ.

3. ಮಾನಸಿಕ ಅಸ್ವಸ್ಥರಿಗೆ ಮಾನಸ ಕೇಂದ್ರಗಳು:

ಮಾನಸಿಕ ಅಸ್ವಸ್ಥರಿಗಾಗಿ ಬೆಂಗಳೂರು, ಬೆಳಗಾವಿ, ರಾಯಚೂರು, ಬಳ್ಳಾರಿ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಮಾನಸ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ಮಂಜೂರಾತಿಯನ್ನು ನೀಡಿರುತ್ತದೆ. ರಾಜ್ಯ ಉಚ್ಚ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳಿಂದ ಆದೇಶಿಸಲ್ಪಡುವ ಮಾನಸಿಕ ಅಸ್ವಸ್ಥರನ್ನು ಹಾಗೂ ರಸ್ತೆಗಳಲ್ಲಿ ಓಡಾಡುವ ನಿರ್ಗತಿಕ ಮಾನಸಿಕ ಅಸ್ವಸ್ಥರನ್ನು ಈ ಕೇಂದ್ರಗಳಲ್ಲಿ ನಿರ್ದಿಷ್ಟ ವೈದ್ಯಕೀಯ ಪ್ರಾಧಿಕಾರದ ಆದೇಶದ ಮೇರೆಗೆ ದಾಖಲಿಸಲು ಅವಕಾಶವಿರುತ್ತದೆ. ಈ ಕೇಂದ್ರಗಳಲ್ಲಿ ಫಲಾನುಭವಿಗಳಿಗೆ ಉಚಿತ ಊಟ, ವಸತಿ, ವೈದ್ಯಕೀಯ ಶುಶ್ರೂಷೆ, ವೈದ್ಯಕೀಯ ಸಲಹೆ(ಕೌನ್ಸಲಿಂಗ್) ಸೌಲಭ್ಯವನ್ನು ನೀಡಲಾಗುತ್ತಿದ್ದು, ಇವು ಅಲ್ಪಾವಧಿ ಕೇಂದ್ರಗಳಾಗಿರುತ್ತವೆ. ಪ್ರಸ್ತುತ ಬೆಂಗಳೂರು ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ಮಾತ್ರ ಮಾನಸ ಕೇಂದ್ರಗಳು ನಡೆಯುತ್ತಿವೆ.

4. ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ವಿಮಾ ಯೋಜನೆ:

ಬುದ್ಧಿಮಾಂದ್ಯ ಮಕ್ಕಳ/ವ್ಯಕ್ತಿಗಳ ತಂದೆ: ತಾಯಿ: ಪೋಷಕರ ವಿಮಾ ಯೋಜನೆಯನ್ನು ಭಾರತೀಯ ಜೀವ ವಿಮಾ ನಿಗಮದ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಬುದ್ಧಿಮಾಂದ್ಯ ಮಕ್ಕಳ/ವ್ಯಕ್ತಿಗಳ ತಂದೆ:ತಾಯಿ: ಪೋಷಕರು ಮರಣ ಹೊಂದಿದ ನಂತರ ಬುದ್ಧಿಮಾಂದ್ಯ ಮಕ್ಕಳ ಜೀವನ ನಿರ್ವಹಣೆಗಾಗಿ ರೂ.20,000/-ಗಳ ಪರಿಹಾರ ಧನವನ್ನು ಕುಟುಂಬದ ನಾಮ ನಿರ್ದೇಶಿತ ಸದಸ್ಯರಿಗೆ ಪಾವತಿಸಲಾಗುತ್ತಿದೆ.

5. ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯರು ಮದುವೆಯಾದಲ್ಲಿ ಪ್ರೋತ್ಸಾಹ ಧನ ನೀಡುವ ಯೋಜನೆ:

ವಿಕಲಚೇತನ ಯುವಕ/ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನ ವ್ಯಕ್ತಿಯ ಹೆಸರಿನಲ್ಲಿ ರೂ.50,000/-ಗಳನ್ನು ಮದುವೆಯಾದ ಸಾಮಾನ್ಯ ವ್ಯಕ್ತಿ ಹಾಗೂ ವಿಕಲಚೇತನರ ಜಂಟಿ ಹೆಸರಿನಲ್ಲಿ 05 ವರ್ಷದ ಅವಧಿಗೆ ಹೂಡಿಕೆಯ ರೂಪದಲ್ಲಿ ನೀಡಿ ಪ್ರೋತ್ಸಾಹ ನೀಡಲು ಹಾಗೂ ಅದರಿಂದ ಬರುವ ಬಡ್ಡಿ ಹಣವನ್ನು ಉಪಯೋಗಿಸುವುದು ಹಾಗೂ 05 ವರ್ಷಗಳ ನಂತರ ಠೇವಣಿ ಮೊತ್ತವನ್ನು ವಾಪಸ್ಸು ಪಡೆಯಬಹುದು ಅಥವಾ ಮುಂದುವರೆಸಲು ಅವಕಾಶವಿರುತ್ತದೆ.

...5

**6. ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಭತ್ಯೆ ಒದಗಿಸುವ ಯೋಜನೆ :**

ಅಂಧ ಮಹಿಳೆಯರು ಮಗುವಿಗೆ ಜನ್ಮ ನೀಡಿದಾಗ ಆ ಮಗುವನ್ನು ಇತರೆ ಸಾಮಾನ್ಯ ತಾಯಂದಿರಂತೆ ಆರೈಕೆ ಮಾಡುವುದು ಕಷ್ಟಕರವಾಗಿರುತ್ತದೆ. ಇಂತಹ ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಮಾಡಲು ಆಯಾ ಸೇವೆ, ಆರೋಗ್ಯ ಪಾಲನೆ, ಪೌಷ್ಠಿಕ ಆಹಾರ, ಔಷಧೋಪಚಾರಗಳಿಗೆ ಮಾಹೆಯಾನ ರೂ.2000/- ದಂತೆ 2 ವರ್ಷಗಳ ಅವಧಿಗೆ ಸಹಾಯಧನವನ್ನು ನೀಡಲಾಗುತ್ತಿದೆ. ಈ ಸೌಲಭ್ಯವನ್ನು ಕನಿಷ್ಠ 2 ಮಕ್ಕಳವರೆಗೆ ಪಡೆಯಬಹುದಾಗಿದೆ.

**(ಡಿ) ಪುನರ್ವಸತಿ ಯೋಜನೆಗಳು:**

**1. ಅಂಗವಿಕಲರಿಗೆ ಸಾಧನ ಸಲಕರಣೆಗಳು :**

ಈ ಯೋಜನೆಯಡಿಯಲ್ಲಿ ಅಂಗವಿಕಲರಿಗೆ ಅವಶ್ಯವಾಗಿರುವ ಸಾಧನ ಸಲಕರಣೆಗಳನ್ನು ನೀಡಲಾಗುತ್ತಿದೆ. ಫಲಾನುಭವಿಯ ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ ರೂ.11,500/- ಮತ್ತು ನಗರ ಪ್ರದೇಶದ ಫಲಾನುಭವಿಗಳಿಗೆ ರೂ.24,000/- ನಿಗದಿಗೊಳಿಸಲಾಗಿದೆ.

**ಅ. ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ :**

ಎಸ್.ಎಸ್.ಎಲ್.ಸಿ ನಂತರ ವ್ಯಾಸಂಗ ಮಾಡುವ ದೃಷ್ಟಿದೋಷವುಳ್ಳ ವಿಕಲಚೇತನ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಪಡೆಯಲು ಅನುಕೂಲವಾಗುವಂತೆ ಮಾತನಾಡುವ (ಟಾಕಿಂಗ್) ಲ್ಯಾಪ್‌ಟಾಪ್‌ಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲಾಗುತ್ತಿದೆ.

**ಆ. ತೀವ್ರತೆರೆನಾದ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರವಾಹನ ಯೋಜನೆ :**

20 ರಿಂದ 60 ವರ್ಷದ ವಯೋಮಾನದ ತೀವ್ರತರವಾದ ದೈಹಿಕ ವಿಕಲಚೇತನರ ಕುಟುಂಬದ ವಾರ್ಷಿಕ ವರಮಾನ ರೂ.2.00 ಲಕ್ಷಗಳಿಗಿಂತ ಕಡಿಮೆ ಇರುವ ವಿಕಲಚೇತನರಿಗೆ ಅನುಕೂಲವಾಗುವಂತೆ ಜೀವಿತ ಕಾಲದಲ್ಲಿ ಒಂದು ಬಾರಿ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ಒದಗಿಸಲಾಗುತ್ತಿದೆ.

**2. ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ ಯೋಜನೆ:-**

ವಿಕಲಚೇತನರನ್ನು ಗುರುತಿಸಿ ಅವರಿಗೆ ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ, ಸಾಮಾಜಿಕ ಭದ್ರತೆ ಹಾಗೂ ಪುನರ್ವಸತಿ ಸೇವೆಗಳನ್ನು ಅವರ ಮನೆ ಬಾಗಿಲಿನಲ್ಲಿಯೇ ಒದಗಿಸಿ ಅವರ ಸರ್ವಾಂಗೀಣ ಪುನರ್ವಸತಿಯನ್ನು ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಈ ಯೋಜನೆಯಡಿ ವಿಕಲಚೇತನರಿಗೆ ಅಗತ್ಯವಿರುವ ವೈದ್ಯಕೀಯ ಸೇವೆ, ವೃತ್ತಿ ಚಿಕಿತ್ಸೆ, ವಿವಿಧ ರೀತಿಯ ಸಾಧನ ಸಲಕರಣೆಗಳನ್ನು ಕೇಂದ್ರಗಳಲ್ಲಿ ತಯಾರಿಸಿ ಒದಗಿಸಲಾಗುವುದು.

**3. ಅಂಗವಿಕಲತೆಯನ್ನು ನಿವಾರಿಸುವ ಶಸ್ತ್ರಚಿಕಿತ್ಸೆಗಾಗಿ ವೈದ್ಯಕೀಯ ಪರಿಹಾರ ನಿಧಿ ಯೋಜನೆ:-**

ಅಂಗವಿಕಲ ವ್ಯಕ್ತಿಗಳಿಗೆ ಅಂಗವಿಕಲತೆಯನ್ನು ನಿವಾರಿಸಲು ಶಸ್ತ್ರ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆ, ಸಂಜಯಗಾಂಧಿ ಆಸ್ಪತ್ರೆಗಳಲ್ಲಿ ಹಾಗೂ ಸುಸಜ್ಜಿತ ಖಾಸಗಿ ಆಸ್ಪತ್ರೆಗಳಲ್ಲಿ ಅಂಗವಿಕಲತೆ ನಿವಾರಣಾ ಶಸ್ತ್ರ ಚಿಕಿತ್ಸೆಗಾಗಿ ರೂ.1.00 ಲಕ್ಷಗಳವರೆಗೆ ಸಹಾಯ ಧನವನ್ನು ಮಂಜೂರು ಮಾಡಲಾಗುತ್ತಿದೆ.

**4. ಸಾಧನೆ ಮತ್ತು ಪ್ರತಿಭೆ ಯೋಜನೆ:**

ವಿಕಲಚೇತನ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡಲು "ಸಾಧನೆ" ಎಂಬ ಯೋಜನೆಯು ಜಾರಿಯಲ್ಲಿದ್ದು, ಕ್ರೀಡೆಗಳಲ್ಲಿ ವಿಶೇಷ ಸಾಧನೆಗೈದ ವಿಕಲಚೇತನರಿಗೆ ರೂ.50,000/-ಗಳ ಧನ ಸಹಾಯವನ್ನು ನೀಡಲಾಗುತ್ತಿದೆ.

ವಿಕಲಚೇತನರು ನೀಡುವ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡುವ ಸಲುವಾಗಿ "ಪ್ರತಿಭೆ" ಎಂಬ ಯೋಜನೆಯು ಜಾರಿಯಲ್ಲಿದ್ದು, ವೈಯಕ್ತಿಕ ಸಾಂಸ್ಕೃತಿಕ ರೂ.2,000/-ಗಳು ಹಾಗೂ ಸಮೂಹ ಕಾರ್ಯಕ್ರಮಕ್ಕೆ ರೂ.10,000/-ಗಳ ಪ್ರೋತ್ಸಾಹಧನ ನೀಡಲಾಗುತ್ತದೆ.

**5. ನಿರಾಮಯ ಆರೋಗ್ಯ ವಿಮಾ ಯೋಜನೆ :**

ಬುದ್ಧಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲತೆಗೆ ಒಳಗಾದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ವಿಕಲಚೇತನರಿಗೆ ನಿರಾಮಯ ಎಂಬ ಆರೋಗ್ಯ ವಿಮಾ ಯೋಜನೆಯು ಜಾರಿಯಲ್ಲಿದ್ದು, ಮೇಲೆ ವಿವರಿಸಿದ ಅಂಗವಿಕಲತೆ ಹೊಂದಿರುವ ಪ್ರತಿ ವ್ಯಕ್ತಿಗೆ ವರ್ಷಕ್ಕೆ ಒಂದು ಸಾರಿಗೆ ಪ್ರೀಮಿಯಂ ಮೊತ್ತ ರೂ.250/-ಗಳನ್ನು ಅಧಿಕೃತ ಸಂಸ್ಥೆಗೆ ಪಾವತಿಸಲಾಗುವುದು. ಪ್ರತಿ ವರ್ಷ ಯೋಜನೆಯಡಿ ಬರುವ ಫಲಾನುಭವಿಗಳು ರೂ.1.00 ಲಕ್ಷಗಳವರೆಗೆ ವೈದ್ಯಕೀಯ ಸೌಲಭ್ಯ ಪಡೆಯಬಹುದಾಗಿರುತ್ತದೆ.

**6. ಅರಿವಿನ ಸಿಂಚನ:**

ವಿಕಲಚೇತನರಿಗೆ ಸೂಕ್ತ ಸಾಧನ ಸಲಕರಣೆ, ಅಡೆತಡೆ ರಹಿತ ವಾತಾವರಣ, ವಿಶೇಷ ಶಿಕ್ಷಣ, ಅವಶ್ಯಕ ಥೆರಪಿ ಚಿಕಿತ್ಸೆ, ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡುವುದರಿಂದ ಸಮಾಜದ ಮುಖ್ಯವಾಹಿನಿಗೆ ತರಬಹುದಾಗಿರುತ್ತದೆ. ವಿಕಲಚೇತನರ ತಂದೆ-ತಾಯಿ, ಪೋಷಕರಿಗೆ ಅವರ ಕರ್ತವ್ಯ/ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸುವುದು ಈ ಯೋಜನೆಯ ಉದ್ದೇಶವಾಗಿದೆ.

**7. ಸ್ಪರ್ಧಾ ಚೇತನ:-**

ಈ ಯೋಜನೆಯಡಿ ವಿಶೇಷ ಸಾಮರ್ಥ್ಯ/ಭಿನ್ನ ಸಾಮರ್ಥ್ಯದ ವಿದ್ಯಾವಂತ ವ್ಯಕ್ತಿಗೆಗಳಿಗೆ ಐ.ಎ.ಎಸ್./ಕೆ.ಎ.ಎಸ್. ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸರ್ಕಾರದ ಇತರೆ ಇಲಾಖೆಗಳಡಿ ಗುರುತಿಸಲ್ಪಟ್ಟ ಪೂರ್ವ ಪರೀಕ್ಷಾ ತರಬೇತಿ ಕೇಂದ್ರಗಳು ಹಾಗೂ ಈ ಇಲಾಖೆಯಿಂದ ಗುರುತಿಸಲ್ಪಟ್ಟ ತರಬೇತಿ ಕೇಂದ್ರಗಳ ಮೂಲಕ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತಿದೆ.

**8. ನಿರುದ್ಯೋಗ ಭತ್ಯೆ :-**

ಎಸ್.ಎಸ್.ಎಲ್.ಸಿ ಹಾಗೂ ನಂತರ ವ್ಯಾಸಂಗ ಮಾಡಿರುವ ನಿರುದ್ಯೋಗಿ ವಿಕಲಚೇತನರಿಗೆ ಮಾಸಿಕ ರೂ.1000/-ಗಳ ನಿರುದ್ಯೋಗ ಭತ್ಯೆಯನ್ನು ಮಂಜೂರು ಮಾಡಲಾಗುತ್ತಿದೆ.

**(ಇ) ಸಾರ್ವಜನಿಕ ಅರಿವು ಮೂಡಿಸುವ ಯೋಜನೆಗಳು:**

**1. ವಿಕಲಚೇತನರ ಮಾಹಿತಿ ಸಲಹಾ ಕೇಂದ್ರ :**

ಅಂಗವಿಕಲರಿಗೆ ಲಭ್ಯವಿರುವ ರಾಜ್ಯ ಸರ್ಕಾರದ ಹಾಗೂ ಕೇಂದ್ರ ಸರ್ಕಾರದ ಯೋಜನೆಗಳ ಹಾಗೂ ವಿಶೇಷ ಶಾಲೆಗಳು ಹಾಗೂ ವೃತ್ತಿ ತರಬೇತಿ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ಒದಗಿಸಲು ನಿರ್ದೇಶನಾಲಯದಲ್ಲಿ ಹಾಗೂ ರಾಜ್ಯದ 30 ಜಿಲ್ಲೆಗಳಲ್ಲಿ ವಿಕಲಚೇತನರ ಸಹಾಯವಾಣಿ / ಮಾಹಿತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಈ ಕೇಂದ್ರಗಳಲ್ಲಿ ಒಳ್ಳೆಯ ಗುಣ ಮಟ್ಟದ ಕೃತಕಾಂಗಗಳು ದೊರೆಯುವ ಮಾಹಿತಿ ಹಾಗೂ ಅಂಗವಿಕಲರಿಗೆ ಬೇಕಾಗಿರುವ ಮಾಹಿತಿಗಳನ್ನು ಮತ್ತು ಇದರ ಜೊತೆಗೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಸಾರ್ವಜನಿಕ ಉದ್ಯಮ ಹಾಗೂ ಖಾಸಗಿ ಉದ್ಯಮಗಳಲ್ಲಿ ಅಂಗವಿಕಲರಿಗೆ ಉದ್ಯೋಗ ಅವಕಾಶಗಳ ಬಗ್ಗೆ ಮಾಹಿತಿಯನ್ನು ನೀಡಲಾಗುವುದು.

...7

2) **<u>ವಿಕಲಚೇತನರಿಗೆ ಗುರುತಿನ ಚೀಟಿ ನೀಡುವ ಯೋಜನೆ:–</u>**

ಈ ಯೋಜನೆಯಡಿಯಲ್ಲಿ ವಿಕಲಚೇತನ ವ್ಯಕ್ತಿಗಳಿಗೆ ಗುರುತಿನ ಚೀಟಿಗಳನ್ನು ನೀಡಲಾಗುತ್ತಿದೆ. ಈ ಗುರುತಿನ ಚೀಟಿಯನ್ನು ವಿವಿಧ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಉಪಯೋಗಿಸಿಕೊಳ್ಳಬಹುದಾಗಿದೆ. **<u>ವಿಕಲಚೇತನರಿಗೆ ವಿಶಿಷ್ಠ ಗುರುತಿನ ಚೀಟಿ</u>** <u>(UNIQUE DISABILITY ID)</u> ನೀಡುವ ಯೋಜನೆಯು ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಯಾಗಿದೆ. ರಾಜ್ಯ ಸರ್ಕಾರದಿಂದ ನೇಮಿಸಲಾಗುವ ವೈದ್ಯಕೀಯ ಪ್ರಾಧಿಕಾರಗಳಿಂದ ದೃಢೀಕರಿಸಲಾಗುವ ವೈದ್ಯಕೀಯ ಪ್ರಮಾಣ ಪತ್ರದ ಸಮಗ್ರ ಮಾಹಿತಿಯುಳ್ಳ ಗಣಕೀಕೃತ ಗುರುತಿನ ಚೀಟಿಯನ್ನು ವಿಕಲಚೇತನ ವ್ಯಕ್ತಿಗಳಿಗೆ ನೀಡುವ ವ್ಯವಸ್ಥೆಯಾಗಿದ್ದು, ಇದರಲ್ಲಿ ವಿಕಲಚೇತನ ವ್ಯಕ್ತಿಯ ವಿವರಗಳು ಹಾಗೂ ಅವರಲ್ಲಿರುವ ವಿಕಲತೆಯ ವಿವರ ಮತ್ತು ಪ್ರಮಾಣವನ್ನು ನಮೂದಿಸಲಾಗಿರುತ್ತದೆ.

<u>3).</u> **<u>ವಿಕಲಚೇತನರಿಗೆ ರಿಯಾಯಿತಿ ದರದ ಬಸ್ ಪಾಸ್:</u>**

ಈ ಯೋಜನೆಯಡಿ ಸರ್ಕಾರವು ಅರ್ಹ ವಿಕಲಚೇತನರಿಗೆ 100 ಕಿ.ಮೀ. ವ್ಯಾಪ್ತಿಯೊಳಗೆ ಸಂಚರಿಸಲು ವಾರ್ಷಿಕ ರೂ.660/–ರ ರಿಯಾಯಿತಿ ದರದಲ್ಲಿ ಬಸ್ ಪಾಸ್‌ಗಳನ್ನು ವಿತರಿಸಲಾಗುತ್ತಿದೆ.

*****

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹೆಚ್.ಎಂ. ರಮೇಶ್ ಗೌಡ ಇವರ ಚುಕ್ಕೆಗುರುತಿಲ್ಲದ ಪ್ರಶ್ನೆಸಂಖ್ಯೆ:1102ಕ್ಕೆ ಅನುಬಂಧ-3

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ಮಾರ್ಚ್-2017ರ ಮಾಹೆಯ ಕಾರ್ಯಕ್ರಮಗಳ ವೆಚ್ಚದ ಘೋಷ್ವಾರೆ

**"ಯೋಜನೆ "**

(ರೂ. ಲಕ್ಷಗಳಲ್ಲಿ)

| ಕ್ರ ಸಂ | ಯೋಜನೆಯ ಹೆಸರು ಮತ್ತು ಲೆಕ್ಕಶೀರ್ಷಿಕೆ | ಆಯ ವ್ಯಯ ನಿಗದಿ | ಆಯ ವ್ಯಯ ಬಿಡುಗಡೆ | ಮಾರ್ಚ್-17ರ ವರೆಗಿನ ವೆಚ್ಚ | ಶೇ. ವೆಚ್ಚ (ನಿಗದಿಗೆ) | ಶೇ. ವೆಚ್ಚ (ಬಿಡುಗಡೆಗೆ) |
|---|---|---|---|---|---|---|
| I | ರಾಜ್ಯ ವಲಯ | | | | | |
| 1 | ಸಮಾಜ ಸೇವಾ ಸಂಕೀರ್ಣ 2235-02-001-0-03 | 250.00 | 37.50 | 20.21 | 8 | 54 |
| 2 | ಅಂಗವಿಕಲರಿಗಾಗಿ ನಿರ್ದೇಶನಾಲಯ 2235-02-001-0-05 | 190.00 | 50.00 | 38.73 | 20 | 77 |
| 3 | ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ ಧನ 2235-02-101-0-05 | 298.00 | 298.00 | 257.15 | 86 | 86 |
| 4 | ಬಡ ಅಂಗವಿಕಲರಿಗೆ ಮಾಸಿಕ ನಿರ್ವಹಣಾ ಭತ್ಯೆ 2235-02-101-0-20 | 3242.00 | 24959.55 | 24959.55 | 770 | 100 |
| 5 | ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ ಅನುಷ್ಠಾನಗೊಳಿಸುವಿಕೆ. 2235-02-101-0-41 | 0.00 | 0.00 | 0.00 | 0 | 0 |
| 6 | ಅಂಗವಿಕಲರ ಅಧಿನಿಯಮ 1995ರ ಮೇರೆಗೆ ಆಯುಕ್ತಾಲಯ 2235-02-101-0-47 | 100.00 | 100.00 | 80.70 | 81 | 81 |
| 7 | ಅಂಗವಿಕಲರಿಗೆ ಸಾಧನ ಸಲಕರಣೆಗಳು 2235-02-101-0-52 | 2000.00 | 2000.00 | 1991.41 | 100 | 100 |
| 8 | ಅಂಗವಿಕಲರಿಗೆ ಗ್ರಾಮೀಣ ಪುನರ್ವಸತಿ ಕಾರ್ಯಕ್ರಮ 2235-02-101-0-53 | 1425.00 | 1338.00 | 1247.52 | 88 | 93 |
| 9 | ವಿಕಲಚೇತನರಿಗೆ ಉದ್ಯೋಗ ಕೋಶ 2235-02-101-0-55 | 250.00 | 48.39 | 37.29 | 15 | 77 |
| 10 | ದೈಹಿಕ ಮತ್ತು ಮಾನಸಿಕ ಸವಾಲಿಗೊಳಗಾದವರ ಕಲ್ಯಾಣ 2235-02-101-0-99 | 2913.00 | 2482.84 | 2094.93 | 72 | 84 |
| 11 | ಹಿರಿಯ ನಾಗರಿಕರ ನೀತಿ 2235-02-104-2-04 | 578.00 | 425.00 | 422.95 | 73 | 100 |
| 12 | ಸ್ವಯಂ ಸೇವಾ ಸಂಸ್ಥೆಗಳು ನಡೆಸುವ ವಿಶೇಷ ಶಾಲೆಗಳಿಗೆ ಸಹಾಯಾನುಧಾನ 2235-02-104-2-06 | 3983.00 | 3925.00 | 3910.98 | 98 | 100 |
| 13 | ಕಟ್ಟಡಗಳು 4235-02-101-1-01 | 100.00 | 100.00 | 100.00 | 100 | 100 |
| 14 | ಸ್ವಾವಲಂಬನ್ ಚತ್ರವಾಸ್ 4235-02-103-1-06 | 100.00 | 0.00 | 0.00 | 0 | 0 |
| | ಒಟ್ಟು ರೂ. | **15429.00** | **35764.28** | **35161.42** | **228** | **98** |
| II | ಜಿಲ್ಲಾ ವಲಯ | | | | | |
| 1 | ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನ ವಿಶೇಷ ಶಾಲೆಗಳು 2235-00-101-0-28 | 1108.00 | 1108.00 | 1107.77 | 100 | 100 |
| 2 | ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನ ವೃದ್ಧಾಶ್ರಮಗಳು 2235-00-101-0-30 | 165.00 | 165.00 | 165.00 | 100 | 100 |
| | ಒಟ್ಟು ರೂ. | **1273.00** | **1273.00** | **1272.77** | **100** | **100** |
| | ಒಟ್ಟು ರೂ. ( I+ II) | **16702.00** | **37037.28** | **36434.19** | **218** | **98** |

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ,
ಮಾರ್ಚ್-2017ರ ಮಾಹೆಯ ಕಾರ್ಯಕ್ರಮಗಳ ವೆಚ್ಚದ ಘೋಷ್ವಾರೆ

**ಯೋಜನೇತರ** (ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಯ ಹೆಸರು ಮತ್ತು ಲೆಕ್ಕಶೀರ್ಷಿಕೆ | ಆಯವ್ಯಯ ನಿಗದಿ | ಆಯವ್ಯಯ ಬಿಡುಗಡೆ | ಮಾರ್ಚ್-17ರ ವರೆಗಿನ ವೆಚ್ಚ | ಶೇ.ವೆಚ್ಚ (ನಿಗದಿಗೆ) | ಶೇ.ವೆಚ್ಚ (ಬಿಡುಗಡೆಗೆ) |
|---|---|---|---|---|---|---|
| I | ರಾಜ್ಯ ವಲಯ | | | | | |
| 1 | ಸಮಾಜ ಸೇವಾ ಸಂಕೀರ್ಣ 2235-02-001-0-03 | 60.00 | 60.00 | 38.78 | 65 | 65 |
| 2 | ಅಂಗವಿಕಲರಿಗಾಗಿ ನಿರ್ದೇಶನಾಲಯ 2235-02-001-0-05 | 230.00 | 230.00 | 205.23 | 89 | 89 |
| 3 | ಕಿವುಡು & ಅಂಧ ಮಕ್ಕಳ ಶಾಲೆಗಳ ಅಭಿವೃದ್ಧಿ 2235-02-101-0-02 | 66.00 | 66.00 | 42.84 | 65 | 65 |
| 4 | ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ ಧನ 2235-02-101-0-05 | 298.00 | 298.00 | 276.59 | 93 | 93 |
| 5 | ಬಡ ಅಂಗವಿಕಲರಿಗೆ ಮಾಸಿಕ ನಿರ್ವಹಣಾ ಭತ್ಯೆ 2235-02-101-0-20 (ಕಂದಾಯ ಇಲಾಖೆಯಿಂದ ನಿರ್ವಹಿಸಲ್ಪಡುತ್ತಿದೆ.) | 87415.00 | 57974.22 | 57974.22 | 66 | 100 |
| 6 | ಮಾನಸಿಕವಾಗಿ ಸವಾಲಿಗೊಳಗಾದವರಿಗೆ ನಿವಾಸಿ ಗೃಹಗಳು 2235-02-101-0-49 | 60.00 | 50.00 | 41.05 | 68 | 82 |
| 7 | ಮಹಿಳಾ ಅಂಗವಿಕಲರಿಗೆ ಹಾಸ್ಟಲ್‌ಗಳು 2235-02-101-0-50 | 458.00 | 321.54 | 321.54 | 70 | 100 |
| 8 | ದೈಹಿಕ ಮತ್ತು ಮಾನಸಿಕ ಸವಾಲಿಗೊಳಗಾದವರ ಕಲ್ಯಾಣ 2235-02-101-0-99 | 777.00 | 777.00 | 622.82 | 80 | 80 |
| | ಒಟ್ಟು ರೂ. | **89364.00** | **59776.76** | **59523.07** | **67** | **100** |
| II | ಜಿಲ್ಲಾ ವಲಯ | | | | | |
| 1 | ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನ ವಿಶೇಷ ಶಾಲೆಗಳು 2235-00-101-0-28 | 345.34 | 345.34 | 345.34 | 100 | 100 |
| 2 | ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನ ವೃದ್ಧಾಶ್ರಮಗಳು 2235-00-101-0-30 | 80.00 | 80.00 | 80.00 | 100 | 100 |
| | ಒಟ್ಟು ರೂ. | **425.34** | **425.34** | **425.34** | **100** | **100** |
| | ಒಟ್ಟು ರೂ. ( I+ II) | **89789.34** | **60202.10** | **59948.41** | **67** | **100** |

# ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
## 2017–2018ರ ಮಾಹೆಯ ಕಾರ್ಯಕ್ರಮಗಳ ವೆಚ್ಚದ ಘೋಷ್ವಾರೆ (ಪೋಷಣಾ ಭತ್ಯೆ ಸೇರಿಸಿ)

(ರೂ. ಲಕ್ಷಗಳಲ್ಲಿ)

| ಕ್ರ ಸಂ | ಯೋಜನೆಯ ಹೆಸರು ಮತ್ತು ಲೆಕ್ಕಶೀರ್ಷಿಕೆ | ಆಯವ್ಯಯ ನಿಗದಿ | ಪರಿಷ್ಕೃತ ಆಯವ್ಯಯ ನಿಗದಿ | ಆಯ ವ್ಯಯ ಬಿಡುಗಡೆ | ಮಾರ್ಚ್–18ರ ವರೆಗಿನ ವೆಚ್ಚ | ಶೇ. ವೆಚ್ಚ (ನಿಗದಿಗೆ) | ಶೇ. ವೆಚ್ಚ (ಬಿಡುಗಡೆಗೆ) |
|---|---|---|---|---|---|---|---|
| I | ರಾಜ್ಯ ವಲಯ | | | | | | |
| 1 | ಸಮಾಜ ಸೇವಾ ಸಂಕೀರ್ಣ 2235-02-001-0-03 | 112.00 | 112.00 | 112.00 | 63.12 | 56 | 56 |
| 2 | ಅಂಗವಿಕಲರಿಗಾಗಿ ನಿರ್ದೇಶನಾಲಯ 2235-02-001-0-05 | 401.00 | 351.00 | 351.00 | 239.74 | 68 | 68 |
| 3 | ಕಿವುಡು & ಅಂಧ ಮಕ್ಕಳ ಶಾಲೆಗಳ ಅಭಿವೃದ್ಧಿ 2235-02-101-0-02 | 71.00 | 71.00 | 71.00 | 41.35 | 58 | 58 |
| 4 | ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ ಧನ 2235-02-101-0-05 | 596.00 | 596.00 | 596.00 | 526.57 | 88 | 88 |
| 5 | ಬಡ ಅಂಗವಿಕಲರಿಗೆ ಮಾಸಿಕ ನಿರ್ವಹಣಾ ಭತ್ಯೆ 2235-02-101-0-20 | 87461.00 | 88372.05 | 88372.05 | 87250.11 | 99 | 99 |
| 6 | ಅಂಗವಿಕಲರ ಅಧಿನಿಯಮ 1995ರ ಮೇರೆಗೆ ಆಯುಕ್ತಾಲಯ 2235-02-101-0-47 | 50.00 | 50.00 | 50.00 | 38.81 | 78 | 78 |
| 7 | ಮಾನಸಿಕವಾಗಿ ಸವಾಲಿಗೊಳಗಾದವರಿಗೆ ನಿವಾಸಿ ಗೃಹಗಳು 2235-02-101-0-49 | 22.00 | 22.00 | 22.00 | 17.98 | 82 | 82 |
| 8 | ಮಹಿಳಾ ಅಂಗವಿಕಲರಿಗೆ ಹಾಸ್ಟಲ್‌ಗಳು 2235-02-101-0-50 | 350.00 | 350.00 | 350.00 | 309.28 | 88 | 88 |
| 9 | ಅಂಗವಿಕಲರಿಗೆ ಸಾಧನ ಸಲಕರಣೆಗಳು 2235-02-101-0-52 | 3000.00 | 3000.00 | 3000.00 | 2783.43 | 93 | 93 |
| 10 | ಅಂಗವಿಕಲರಿಗೆ ಗ್ರಾಮೀಣ ಪುನರ್ವಸತಿ ಕಾರ್ಯಕ್ರಮ 2235-02-101-0-53 | 2516.00 | 1971.04 | 1971.04 | 1738.55 | 88 | 88 |
| 11 | ವಿಕಲಚೇತನರಿಗೆ ಉದ್ಯೋಗ ಕೋಶ 2235-02-101-0-55 | 200.00 | 200.00 | 200.00 | 12.60 | 6 | 6 |
| 12 | ದೈಹಿಕ ಮತ್ತು ಮಾನಸಿಕ ಸವಾಲಿಗೊಳಗಾದವರ ಕಲ್ಯಾಣ 2235-02-101-0-99 | 3941.00 | 3535.00 | 3535.00 | 2783.01 | 79 | 79 |
| 13 | ಹಿರಿಯ ನಾಗರಿಕರ ನೀತಿ 2235-02-104-2-04 | 550.00 | 550.00 | 550.00 | 424.00 | 77 | 77 |
| 14 | ಸ್ವಯಂ ಸೇವಾ ಸಂಸ್ಥೆಗಳು ನಡೆಸುವ ವಿಶೇಷ ಶಾಲೆಗಳಿಗೆ ಸಹಾಯಾನುಧಾನ 2235-02-104-2-06 | 6056.00 | 6856.96 | 6856.96 | 5751.10 | 84 | 84 |
| 15 | ಕಟ್ಟಡಗಳು 4235-02-101-1-01 | 121.00 | 221.00 | 221.00 | 221.00 | 100 | 100 |
| 16 | ಸ್ವಾವಲಂಬನ್ ಛಾತ್ರವಾಸ್ 4235-02-103-1-06 | 53.00 | 3.00 | 3.00 | 0.00 | 0 | 0 |
| | ಒಟ್ಟು ರೂ. | **105500.00** | **106261.05** | **106261.05** | **102200.65** | **96** | **96** |
| II | ಜಿಲ್ಲಾ ವಲಯ | | | | | | |
| 1 | ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನ ವಿಶೇಷ ಶಾಲೆಗಳು 2235-00-101-0-28 | 1668.00 | 1668.00 | 1668.00 | 1668.00 | 100 | 100 |
| 2 | ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನ ವೃದ್ಧಾಶ್ರಮಗಳು 2235-00-101-0-30 | 253.00 | 253.00 | 253.00 | 253.00 | 100 | 100 |
| | ಒಟ್ಟು ರೂ. | **1921.00** | **1921.00** | **1921.00** | **1921.00** | **100** | **100** |
| | ಒಟ್ಟು ರೂ. ( I+ II) | **107421.00** | **108182.05** | **108182.05** | **104121.65** | **96** | **96** |

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ಮಾರ್ಚ್–2018ರ ಮಾಹೆಯ ಕಾರ್ಯಕ್ರಮಗಳ ವೆಚ್ಚದ ಘೋಷ್ವಾರೆ (ಪೋಷಣಾ ಭತ್ಯೆ ಹೊರತು ಪಡಿಸಿ)

(ರೂ. ಲಕ್ಷಗಳಲ್ಲಿ)

| ಕ್ರ ಸಂ | ಯೋಜನೆಯ ಹೆಸರು ಮತ್ತು ಲೆಕ್ಕಶೀರ್ಷಿಕೆ | ಆಯ ವ್ಯಯ ನಿಗದಿ | ಪರಿಷ್ಕೃತ ಆಯವ್ಯಯ ನಿಗದಿ | ಆಯ ವ್ಯಯ ಬಿಡುಗಡೆ | ಮಾರ್ಚ್–18ರ ವರೆಗಿನ ವೆಚ್ಚ | ಶೇ. ವೆಚ್ಚ (ನಿಗದಿಗೆ) | ಶೇ.ವೆಚ್ಚ (ಬಿಡುಗಡೆಗೆ) |
|---|---|---|---|---|---|---|---|
| I | ರಾಜ್ಯ ವಲಯ | | | | | | |
| 1 | ಸಮಾಜ ಸೇವಾ ಸಂಕೀರ್ಣ 2235-02-001-0-03 | 112.00 | 112.00 | 112.00 | 63.12 | 56 | 56 |
| 2 | ಅಂಗವಿಕಲರಿಗಾಗಿ ನಿರ್ದೇಶನಾಲಯ 2235-02-001-0-05 | 401.00 | 351.00 | 351.00 | 239.74 | 68 | 68 |
| 3 | ಕಿವುಡು & ಅಂಧ ಮಕ್ಕಳ ಶಾಲೆಗಳ ಅಭಿವೃದ್ಧಿ 2235-02-101-0-02 | 71.00 | 71.00 | 71.00 | 41.35 | 58 | 58 |
| 4 | ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ ಧನ 2235-02-101-0-05 | 596.00 | 596.00 | 596.00 | 526.57 | 88 | 88 |
| 5 | ಅಂಗವಿಕಲರ ಅಧಿನಿಯಮ 1995ರ ಮೇರೆಗೆ ಆಯುಕ್ತಾಲಯ 2235-02-101-0-47 | 50.00 | 50.00 | 50.00 | 38.81 | 78 | 78 |
| 6 | ಮಾನಸಿಕವಾಗಿ ಸವಾಲಿಗೊಳಗಾದವರಿಗೆ ನಿವಾಸಿ ಗೃಹಗಳು 2235-02-101-0-49 | 22.00 | 22.00 | 22.00 | 17.98 | 82 | 82 |
| 7 | ಮಹಿಳಾ ಅಂಗವಿಕಲರಿಗೆ ಹಾಸ್ಟಲ್‌ಗಳು 2235-02-101-0-50 | 350.00 | 350.00 | 350.00 | 309.28 | 88 | 88 |
| 8 | ಅಂಗವಿಕಲರಿಗೆ ಸಾಧನ ಸಲಕರಣೆಗಳು 2235-02-101-0-52 | 3000.00 | 3000.00 | 3000.00 | 2783.43 | 93 | 93 |
| 9 | ಅಂಗವಿಕಲರಿಗೆ ಗ್ರಾಮೀಣ ಪುನರ್ವಸತಿ ಕಾರ್ಯಕ್ರಮ 2235-02-101-0-53 | 2516.00 | 1971.04 | 1971.04 | 1738.55 | 88 | 88 |
| 10 | ವಿಕಲಚೇತನರಿಗೆ ಉದ್ಯೋಗ ಕೋಶ 2235-02-101-0-55 | 200.00 | 200.00 | 200.00 | 12.60 | 6 | 6 |
| 11 | ದೈಹಿಕ ಮತ್ತು ಮಾನಸಿಕ ಸವಾಲಿಗೊಳಗಾದವರ ಕಲ್ಯಾಣ 2235-02-101-0-99 | 3941.00 | 3535.00 | 3535.00 | 2783.01 | 79 | 79 |
| 12 | ಹಿರಿಯ ನಾಗರಿಕರ ನೀತಿ 2235-02-104-2-04 | 550.00 | 550.00 | 550.00 | 424.00 | 77 | 77 |
| 13 | ಸ್ವಯಂ ಸೇವಾ ಸಂಸ್ಥೆಗಳು ನಡೆಸುವ ವಿಶೇಷ ಶಾಲೆಗಳಿಗೆ ಸಹಾಯಾನುಧಾನ 2235-02-104-2-06 | 6056.00 | 6856.96 | 6856.96 | 5751.10 | 84 | 84 |
| 14 | ಕಟ್ಟಡಗಳು 4235-02-101-1-01 | 121.00 | 221.00 | 221.00 | 221.00 | 100 | 100 |
| 15 | ಸ್ವಾವಲಂಬನ್ ಚತ್ರವಾಸ್ 4235-02-103-1-06 | 53.00 | 3.00 | 3.00 | 0.00 | 0 | 0 |
| | ಒಟ್ಟು ರೂ. | **18039.00** | **17889.00** | **17889.00** | **14950.54** | **84** | **84** |
| II | ಜಿಲ್ಲಾ ವಲಯ | | | | | | |
| 1 | ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನ ವಿಶೇಷ ಶಾಲೆಗಳು 2235-00-101-0-28 | 1668.00 | 1668.00 | 1668.00 | 1668.00 | 100 | 100 |
| 2 | ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನ ವೃದ್ಧಾಶ್ರಮಗಳು 2235-00-101-0-30 | 253.00 | 253.00 | 253.00 | 253.00 | 100 | 100 |
| | ಒಟ್ಟು ರೂ. | **1921.00** | **1921.00** | **1921.00** | **1921.00** | **100** | **100** |
| | ಒಟ್ಟು ರೂ. ( I+ II) | **19960.00** | **19810.00** | **19810.00** | **16871.54** | **85** | **85** |

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ಮಾರ್ಚ್–2019ರ ಮಾಹೆಯ ಕಾರ್ಯಕ್ರಮಗಳ ವೆಚ್ಚದ ಘೋಷ್ವಾರೆ (ಪೋಷಣಾ ಭತ್ಯೆ ಹೊರತು ಪಡಿಸಿ)

(ಲಕ್ಷ ರೂ.ಗಳಲ್ಲಿ)

| ಕ್ರ ಸಂ | ಯೋಜನೆಯ ಹೆಸರು ಮತ್ತು ಲೆಕ್ಕಶೀರ್ಷಿಕೆ | ಆಯ ವ್ಯಯ ನಿಗದಿ | ಪರಿಷ್ಕೃತ ಅನುದಾನ | ಆಯವ್ಯಯ ಬಿಡುಗಡೆ | ಮಾರ್ಚ್–19ರ ವರೆಗಿನ ವೆಚ್ಚ | ಶೇ ವೆಚ್ಚ (ನಿಗದಿಗೆ) | ಶೇ ವೆಚ್ಚ (ಬಿಡುಗಡೆಗೆ) |
|---|---|---|---|---|---|---|---|
| I | ರಾಜ್ಯ ವಲಯ | | | | | | |
| 1 | ಸಮಾಜ ಸೇವಾ ಸಂಕೀರ್ಣ 2235-02-001-0-03 | 155.00 | 155.00 | 155.00 | 62.75 | 40 | 40 |
| 2 | ಅಂಗವಿಕಲರಿಗಾಗಿ ನಿರ್ದೇಶನಾಲಯ 2235-02-001-0-05 | 999.00 | 700.00 | 700.00 | 686.11 | 98 | 98 |
| 3 | ಕಿವುಡು & ಅಂಧ ಮಕ್ಕಳ ಶಾಲೆಗಳ ಅಭಿವೃದ್ಧಿ 2235-02-101-0-02 | 70.00 | 70.00 | 70.00 | 56.22 | 80 | 80 |
| 4 | ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ ಧನ 2235-02-101-0-05 | 596.00 | 596.00 | 596.00 | 504.08 | 85 | 85 |
| 5 | ಅಂಗವಿಕಲರ ಅಧಿನಿಯಮ 1995ರ ಮೇರೆಗೆ ಆಯುಕ್ತಾಲಯ 2235-02-101-0-47 | 43.00 | 43.00 | 43.00 | 61.22 | 142 | 142 |
| 6 | ಮಾನಸಿಕವಾಗಿ ಸವಾಲಿಗೊಳಗಾದವರಿಗೆ ನಿವಾಸಿ ಗೃಹಗಳು 2235-02-101-0-49 | 56.00 | 56.00 | 56.00 | 27.34 | 49 | 49 |
| 7 | ಮಹಿಳಾ ಅಂಗವಿಕಲರಿಗೆ ಹಾಸ್ಟಲ್‌ಗಳು 2235-02-101-0-50 | 350.00 | 350.00 | 350.00 | 313.32 | 90 | 90 |
| 8 | ಅಂಗವಿಕಲರಿಗೆ ಸಾಧನ ಸಲಕರಣೆಗಳು 2235-02-101-0-52 | 1300.00 | 1268.00 | 1268.00 | 240.85 | 19 | 19 |
| 9 | ಅಂಗವಿಕಲರಿಗೆ ಗ್ರಾಮೀಣ ಪುನರ್ವಸತಿ ಕಾರ್ಯಕ್ರಮ 2235-02-101-0-53 | 1901.00 | 2271.00 | 2271.00 | 1756.93 | 77 | 77 |
| 10 | ವಿಕಲಚೇತನರಿಗೆ ಉದ್ಯೋಗ ಕೋಶ 2235-02-101-0-55 | 100.00 | 45.00 | 45.00 | 10.40 | 23 | 23 |
| 11 | ದೈಹಿಕ ಮತ್ತು ಮಾನಸಿಕ ಸವಾಲಿಗೊಳಗಾದವರ ಕಲ್ಯಾಣ 2235-02-101-0-99 | 2850.00 | 2600.00 | 2600.00 | 2464.95 | 95 | 95 |
| 12 | ಹಿರಿಯ ನಾಗರಿಕರ ನೀತಿ 2235-02-104-2-04 | 500.00 | 500.00 | 500.00 | 424.86 | 85 | 85 |
| 13 | ಸ್ವಯಂ ಸೇವಾ ಸಂಸ್ಥೆಗಳು ನಡೆಸುವ ವಿಶೇಷ ಶಾಲೆಗಳಿಗೆ ಸಹಾಯಾನುಧಾನ 2235-02-104-2-06 | 5236.00 | 5502.00 | 5502.00 | 5257.55 | 96 | 96 |
| 14 | ಕಟ್ಟಡಗಳು 4235-02-101-1-01 | 132.00 | 132.00 | 132.00 | 113.97 | 86 | 86 |
| | **ಒಟ್ಟು ರೂ.** | **14288.00** | **14288.00** | **14288.00** | **11980.55** | **84** | **84** |
| II | ಜಿಲ್ಲಾ ವಲಯ | | | | | | |
| 1 | ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನ ವಿಶೇಷ ಶಾಲೆಗಳು 2235-00-101-0-28 | 1676.00 | 1676.00 | 1676.00 | 1676.00 | 100 | 100 |
| 2 | ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನ ವೃದ್ಧಾಶ್ರಮಗಳು 2235-00-101-0-30 | 240.00 | 240.00 | 240.00 | 239.70 | 100 | 100 |
| | **ಒಟ್ಟು ರೂ.** | **1916.00** | **1916.00** | **1916.00** | **1915.70** | **100** | **100** |
| | **ಒಟ್ಟು ರೂ. ( I+ II)** | **16204.00** | **16204.00** | **16204.00** | **13896.25** | **86** | **86** |

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

2018-2019ನೇ ಸಾಲಿನ ಕಾರ್ಯಕ್ರಮಗಳ ವೆಚ್ಚದ ಘೋಷ್ವಾರೆ (ಪೋಷಣಾ ಭತ್ಯೆ ಸೇರಿಸಿ)

(ಲಕ್ಷ ರೂ.ಗಳಲ್ಲಿ)

| ಕ್ರ ಸಂ | ಯೋಜನೆಯ ಹೆಸರು ಮತ್ತು ಲೆಕ್ಕಶೀರ್ಷಿಕೆ | ಆಯ ವ್ಯಯ ನಿಗದಿ | ಪರಿಷ್ಕೃತ ಅನುದಾನ | ಆಯವ್ಯಯ ಬಿಡುಗಡೆ | ಮಾರ್ಚ್-19ರ ವರೆಗಿನ ವೆಚ್ಚ | ಶೇ ವೆಚ್ಚ (ನಿಗದಿಗೆ) | ಶೇ ವೆಚ್ಚ (ಬಿಡುಗಡೆಗೆ) |
|---|---|---|---|---|---|---|---|
| **I** | ರಾಜ್ಯ ವಲಯ | | | | | | |
| 1 | ಸಮಾಜ ಸೇವಾ ಸಂಕೀರ್ಣ 2235-02-001-0-03 | 155.00 | 155.00 | 155.00 | 62.75 | 40 | 40 |
| 2 | ಅಂಗವಿಕಲರಿಗಾಗಿ ನಿರ್ದೇಶನಾಲಯ 2235-02-001-0-05 | 999.00 | 700.00 | 700.00 | 686.11 | 98 | 98 |
| 3 | ಕಿವುಡು & ಅಂಧ ಮಕ್ಕಳ ಶಾಲೆಗಳ ಅಭಿವೃದ್ಧಿ 2235-02-101-0-02 | 70.00 | 70.00 | 70.00 | 56.22 | 80 | 80 |
| 4 | ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ ಧನ 2235-02-101-0-05 | 596.00 | 596.00 | 596.00 | 504.08 | 85 | 85 |
| 5 | ಬಡ ಅಂಗವಿಕಲರಿಗೆ ಮಾಸಿಕ ನಿರ್ವಹಣಾ ಭತ್ಯೆ 2235-02-101-0-20 | 109779.00 | 109779.00 | 109779.00 | 106018.44 | 97 | 97 |
| 6 | ಅಂಗವಿಕಲರ ಅಧಿನಿಯಮ 1995ರ ಮೇರೆಗೆ ಆಯುಕ್ತಾಲಯ 2235-02-101-0-47 | 43.00 | 43.00 | 43.00 | 61.22 | 142 | 142 |
| 7 | ಮಾನಸಿಕವಾಗಿ ಸವಾಲಿಗೊಳಗಾದವರಿಗೆ ನಿವಾಸಿ ಗೃಹಗಳು 2235-02-101-0-49 | 56.00 | 56.00 | 56.00 | 27.34 | 49 | 49 |
| 8 | ಮಹಿಳಾ ಅಂಗವಿಕಲರಿಗೆ ಹಾಸ್ಟಲ್‌ಗಳು 2235-02-101-0-50 | 350.00 | 350.00 | 350.00 | 313.32 | 90 | 90 |
| 9 | ಅಂಗವಿಕಲರಿಗೆ ಸಾಧನ ಸಲಕರಣೆಗಳು 2235-02-101-0-52 | 1300.00 | 1268.00 | 1268.00 | 240.85 | 19 | 19 |
| 10 | ಅಂಗವಿಕಲರಿಗೆ ಗ್ರಾಮೀಣ ಪುನರ್ವಸತಿ ಕಾರ್ಯಕ್ರಮ 2235-02-101-0-53 | 1901.00 | 2271.00 | 2271.00 | 1756.93 | 77 | 77 |
| 11 | ವಿಕಲಚೇತನರಿಗೆ ಉದ್ಯೋಗ ಕೋಶ 2235-02-101-0-55 | 100.00 | 45.00 | 45.00 | 10.40 | 23 | 23 |
| 12 | ದೈಹಿಕ ಮತ್ತು ಮಾನಸಿಕ ಸವಾಲಿಗೊಳಗಾದವರ ಕಲ್ಯಾಣ 2235-02-101-0-99 | 2850.00 | 2600.00 | 2600.00 | 2464.95 | 95 | 95 |
| 13 | ಹಿರಿಯ ನಾಗರಿಕರ ನೀತಿ 2235-02-104-2-04 | 500.00 | 500.00 | 500.00 | 424.86 | 85 | 85 |
| 14 | ಸ್ವಯಂ ಸೇವಾ ಸಂಸ್ಥೆಗಳು ನಡೆಸುವ ವಿಶೇಷ ಶಾಲೆಗಳಿಗೆ ಸಹಾಯಾನುಧಾನ 2235-02-104-2-06 | 5236.00 | 5502.00 | 5502.00 | 5257.55 | 96 | 96 |
| 15 | ಕಟ್ಟಡಗಳು 4235-02-101-1-01 | 132.00 | 132.00 | 132.00 | 113.97 | 86 | 86 |
| | ಒಟ್ಟು ರೂ. | **124067.00** | **124067.00** | **124067.00** | **117998.99** | **95** | **95** |
| **II** | ಜಿಲ್ಲಾ ವಲಯ | | | | | | |
| 1 | ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನ ವಿಶೇಷ ಶಾಲೆಗಳು 2235-00-101-0-28 | 1676.00 | 1676.00 | 1676.00 | 1676.00 | 100 | 100 |
| 2 | ಸರ್ಕಾರೇತರ ಸಂಸ್ಥೆಗಳಿಗೆ ಸಹಾಯಧನ ವೃದ್ಧಾಶ್ರಮಗಳು 2235-00-101-0-30 | 240.00 | 240.00 | 240.00 | 239.70 | 100 | 100 |
| | ಒಟ್ಟು ರೂ. | **1916.00** | **1916.00** | **1916.00** | **1915.70** | **100** | **100** |
| | ಒಟ್ಟು ರೂ. ( I+ II) | **125983.00** | **125983.00** | **125983.00** | **119914.69** | **95** | **95** |